ಜವಾಬ್ದಾರಿ ಇದ್ದಕಾರಣ ಅವರಿಗೆ ಸಹಕರಿಸತಕ್ಕಂಥ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಅದಕ್ಕೋಸ್ಕರ ಎಲ್ಲಿಯೂ ಕೂಡ ವ್ಯತ್ಯಾಸಗಳು ಆಗಬಾರದು ಎಂದು ಅವರಿಗೆ ಸಹಕರಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಆದುದರಿಂದ ರಾಂಗ್ ಮೆಸೇಜ್ ಈ ಮನೆಯಿಂದ ಹೋಗಬಾರದು ಎನ್ನುವ ದೃಷ್ಟಿಯಿಂದ ನಾವು ಪದೇಪದೇ ಚರ್ಚೆಯಲ್ಲಿ ಇಂಟರ್‌ಫಿಯರ್ ಆಗಿ ಹೇಳುವೆ ಹೊರತು ಬೇರೆ ಯಾವ ದೃಷ್ಟಿಯಿಂದ ಆ ರೀತಿ ಮಾಡಿಲ್ಲ. ಆದುದರಿಂದ ಈ ಒಂದು ಸಂದರ್ಭದಲ್ಲಿ ನಾವು ಪುನ: ತಮಿಳುನಾಡು ಸರ್ಕಾರಕ್ಕೆ ಕೆಳಿಕೊಳ್ಳುತ್ತೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೂಡ ತಮಿಳುನಾಡು ಮುಖ್ಯಮಂತ್ರಿಗಳ ಜೊತೆಯಲ್ಲಿ ಅನೇಕಸಾರಿ ಮಾತನಾಡಿದ್ದಾರೆ. ಮೊನ್ನೆ ಕೂಡ ಮಾತನಾಡಿದ್ದಾರೆ. ಡಾ॥ ರಾಜ್‌ಕುಮಾರ್ ಅವರ ಕುಟುಂಬದ ಸದಸ್ಯರೂ ಕೂಡ ಅವರನ್ನು ಭೇಟಿಯಾಗಿ ಬಂದಿದ್ದಾರೆ. ಈ ವಿಚಾರದಲ್ಲಿ ಆಶಾದಾಯಕವಾದಂತಹ ಮಾತುಗಳು ಕೇಳಿ ಬರುತ್ತಿವೆ. ಆದುದರಿಂದ ಇಂತಹ ಒಂದು ಸಂದರ್ಭದಲ್ಲಿ ನಮ್ಮ ಒಗ್ಗಟ್ಟನ್ನು ಪ್ರದರ್ಶನ ಮಾಡತಕ್ಕಂಥಾದ್ದು ಬಹಳ ಮುಖ್ಯ. ಹಾಗೂ ಈ ಒಗ್ಗಟ್ಟನ್ನು ನಾವು ಮೂರು ತಿಂಗಳಿನಿಂದ ತೋರಿಸುತ್ತಿದ್ದೇವೆ. ಇದರಲ್ಲೆ ಭಿನ್ನಾಭಿಪ್ರಾಯವಿಲ್ಲ. ಇಡೀ ರಾಜ್ಯದ ಜನತೆ ಹಾಗೂ ಜನರಿಂದ ಆರಿಸಿಬಂದಂತಹ ಪ್ರತಿನಿಧಿಗಳೂ ಕೂಡ ಆದೇರೀತಿಯ ಒಗ್ಗಟ್ಟಿನಿಂದ ಇದ್ದೇವೆ. ಅದಕ್ಕಾಗಿ ಡಾ॥ ರಾಜ್‌ಕುಮಾರ್ ಅವರ ಬಿಡುಗಡೆ ಆಗುವವರೆಗೆ ಯಾವ ಒಂದು ಒಡಕು ದ್ವನಿ ಬೇಡವೆಂದು ನಾವೆಲ್ಲರೂ ಕೂಡ ಮಾತನಾಡಿದ್ದು ಮತ್ತು ಮನವಿ ಮಾಡಿಕೊಂಡಿದ್ದು. ಅದಕ್ಕೆ ತಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೀರಿ. ಅದಕ್ಕೋಸ್ಕರ ಇದನ್ನು ಹೆಚ್ಚಿನ ಚರ್ಚೆ ಇಲ್ಲದೆ ಇದನ್ನು ಮುಕ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ಎರಡು ಕಡೆ ಸದಸ್ಯರ ಅಭಿಪ್ರಾಯಗಳನ್ನು ಕೇಳಿದ್ದೇನೆ. ಈ ವಿಚಾರದಲ್ಲಿ ನನಗತ ಎಷ್ಟು ಆತಂಕ ಇತ್ತು ಎಂದರೆ ಆಗಸ್ಟ್ 29ನೇ ತಾರೀಖು ನಾನು ವಿದೇಶಕ್ಕೆ ಹೋಗಿ ಪುನೇ ಈ ತಿಂಗಳ ಐದನೇ ತಾರೀಖು ವಾಪಸ್ಸು ಬರುವವರೆಗೂ ಬೆಳಿಗ್ಗೆ ಎದ್ದತಕ್ಷಣ ಸಾಮಾನ್ಯವಾಗಿ ಪ್ರತಿಯೊಂದು ಮನೆಯಲ್ಲೂ ಹಾಗೂ ಆಫೀಸ್‌ನಲ್ಲೂ ಇಂಟರ್‌ನೆಟ್ ಇರುತ್ತದೆ, ಐದು, ಐದೂವರೆ ಗಂಟೆಗೆ ಎದ್ದು ಡಾ॥ ರಾಜ್‌ಕುಮಾರ್ ವಿಷಯ ಏನಾಯಿತು ಎಂದು ನೋಡುತ್ತಿದ್ದೆ. ಪತ್ರಿಕೆಗಳಲ್ಲಿ ವಿಷಯಗಳು ಬರುವುದಕ್ಕೆ ಮೊದಲೆ ಇಂಟರ್‌ನೆಟ್‌ನಲ್ಲಿ ಬಂದುಬಿಟ್ಟಿರುತ್ತದೆ. ಈ ವಿಚಾರದ ಬಗ್ಗೆ ನನಗೆ ಅಷ್ಟೊಂದು ಆತಂಕ ಆಗಿತ್ತು ನಿಮ್ಮ ಆತಂಕಕ್ಕೆ ನಾನೂ ಕೂಡ ಸಹಭಾಗಿಯಾಗಿ ಈ ವಿಷಯದ ಬಗ್ಗೆ ತೀರ್ಪು ಕೊಡುತ್ತೇನೆ.

ಸಭಾಧ್ಯಕ್ಷರ ತೀರ್ಪು

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಹಾಗೂ ಇತರ ಸದಸ್ಯರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 60ನೇ ನಿಯಮದ ಮೇರೆಗೆ, ಮತ್ತು ಶ್ರೀ ಪಿ.ಜಿ.ಆರ್. ಸಿಂಧ್ಯಾ ಹಾಗೂ ಇತರ ಸದಸ್ಯರುಗಳು ನಿಯಮ 69ರ ಮೇರೆಗೆ ನರಹಂತಕ, ದಂತಚೋರ ಹಾಗೂ ಕಾಡುಗಳ್ಳ ವೀರಪ್ಪನ್ ಡಾ॥ ರಾಜ್‌ಕುಮಾರ್ ರವರನ್ನು ಅಪಹರಿಸಿರುವ ಹಾಗೂ ಕಳೆದ ಹದಿನೈದು ವರ್ಷಗಳಿಂದ ಸರ್ಕಾರಿ ಅಧಿಕಾರಿಗಳ ಹತ್ಯೆ ಅಪಹರಣಗಳು ಇತ್ಯಾದಿ ಕುಕೃತ್ಯಗಳನ್ನು ಎಸಗಿದ್ದರೂ, ಆತನನ್ನು ಹಿಡಿಯಲು ಅಸಮರ್ಥರಾಗಿರುವ ಬಗ್ಗೆ ಸೂಚನೆ ಕೊಟ್ಟಿದ್ದಾರೆ.

ರಾಷ್ಟ್ರದ ಆಡಳಿತ ವ್ಯವಸ್ಥೆ ಹಾಗೂ ರಾಷ್ಟ್ರದ ಪ್ರಜೆಗಳ ವಿಷಯವಾಗಿ ಚರ್ಚಿಸುವ ಅಧಿಕರ ಹಾಗೂ ಹಕ್ಕು ವಿದಾನ ಮಂಡಲಕ್ಕೆ ಹಾಗೂ ಅದರ ಸದಸ್ಯರಿಗೆ. ಸದನದಲ್ಲಿ ಮಾತನಾಡುವ ಹಕ್ಕು ಸಂಸದೀಯ ಪದ್ಧತಿಯಲ್ಲಿ ಅತಿ ಪ್ರಮುಖ್ಯವಾದುದು. ಆದ್ದಾಗ್ಯೂ ಕೆಲವೊಂದು ಸಂದರ್ಭಗಳಲ್ಲಿ ಸದನದಲ್ಲಿ ಮಾತನಾಡುವ ವಾಕ್ ಸ್ವಾತಂತ್ರ್ಯಗಳಿಗೆ ತನ್ನದೇ ಆದ ಇತಿ ಮಿತಿಗಳಿವೆ. ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ವಿಷಯಗಳ ಬಗ್ಗೆ ಚರ್ಚಿಸದಿರುವುದು ಅಂತಹ ಇತಿಮಿತಿಗಳಲ್ಲಿ ಒಂದಾಗಿದೆ. ಇತ್ಯರ್ಥವಾಗದೇ ನ್ಯಾಯಾಲಯದಲ್ಲಿರುವ ವಿಷಯಗಳ ಬಗ್ಗೆ ನ್ಯಾಯಾಲಯಗಳ ಹೊರಗೆ ಅದರಲ್ಲೂ ಸದನದಲ್ಲಿ ಅಂತಹ ವಿಷಯಗಳ ಬಗ್ಗೆ ಚರ್ಚಿಸಿದರೆ ಅವು ನ್ಯಾಯಾಲಯದ ನಡವಳಿಕೆಗಳ ಮೇಲೆ ಪರಿಣಾಮ ಬೀರಬಹುದು ಎಂಬ ದೃಷ್ಟಿಯಿಂದ ಸದನದಲ್ಲಿ ಚರ್ಚಿಸುವ ಅವಕಾಶವಿಲ್ಲವಾಗಿದೆ. ಸಂಸದೀಯ ಸತ್ಸಂಪ್ರದಾಯದಂತೆ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವ ವಿಷಯಗಳ ಬಗ್ಗೆ ಸದನದಲ್ಲಿ ಚರ್ಚಿಸುವುದು ಸಾಧುವಲ್ಲ ಹಾಗೂ ಅದು ನಿಯಮಬಾಹಿರವಾಗಿರುತ್ತದೆ.

ಹಿಂದಿನ ಸತ್‌ಸಂಪ್ರದಾಯಗಳನ್ನು ಹಾಗೂ ಅನೇಕ ಸಂದರ್ಭಗಳಲ್ಲಿ ಸಭಾಧ್ಯಕ್ಷರು ಇಂತಹ ವಿಷಯಗಳ ಮೇಲೆ ನೀಡಿರುವ ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡು ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಈ ವಿಷಯವು ನ್ಯಾಯಾಲಯದಲ್ಲಿ ಇತ್ಯರ್ಥವಾಗುವವರೆಗೆ ಯಾವುದೇ ರೂಪದಲ್ಲಿ ಹಾಗೂ ಯಾವುದೇ ನಿಯಮದಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ನನ್ನ ಅನುಮತಿಯನ್ನು ನಿರಾಕರಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಬೈರೇಗೌಡರೆ ಫ್ಲಡ್ ಡ್ಯಾಮೇಜಸ್ ಬಗ್ಗೆ ಚರ್ಚೆಯನ್ನು ಈಗ ತೆಗೆದಕೊಳ್ಳೋಣ ಅಥವಾ ನಾಳೆ ತೆಗೆದುಕೊಳ್ಳೋಣವಾ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈ ವಿಚಾರ ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೆ ತೆಗೆದುಕೊಳ್ಳಬಾರದು ಎಂದು ಹೇಳುತ್ತಿದ್ದೀರಾ, ಅದನ್ನು ತಾವು ಕ್ಲಾರಿಫೈ ಮಾಡಬೇಕು.

MR. SPEAKER : We will amend it...

ಶ್ರೀ ಬಿ. ಸೋಮಶೇಖರ್ : ಒಪ್ಪಂದ ಆಗಿರತಕ್ಕಂಥಾದ್ದು 30ನೇ ತಾರೀಖಿನವರೆಗೂ ಕಾಯೋಣ. 30ನೇ ತಾರೀಖು ಆದಮೇಲೆ ಮುಂದಿನ ತಿಂಗಳು ಮೂರು ಅಥವಾ ನಾಲ್ಕನೇ ತಾರೀಖಿನಲ್ಲಿ ಈ ವಿಷಯವನ್ನು ಬೇರೆ ರೂಪದಲ್ಲೆ ತೆಗೆದುಕೊಂಡು ಚರ್ಚೆಯಾಗಲಿ. ಎಷ್ಟು ಗಂಟೆ ಬೇಕಾದರೂ ತೆಗೆದುಕೊಳ್ಳೋಣ.

ಅಧ್ಯಕ್ಷರು : ಇಲ್ಲ ದಯವಿಟ್ಟು ಕ್ಷಮಿಸಬೇಕು. ನ್ಯಾಯಾಲಯದ ಮುಂದೆ ಇರುವವರೆಗೂ ಎಂದು ಹೇಳಿದ್ದೇನೆ. ಇದು ಪುನ: ನ್ಯಾಯಾಲಯದ ಮುಂದೆ ಇದ್ದರೆ ಮತ್ತೆ ಇದೇ ಪ್ರೊಸಿಜರ್ ಮುಂದುವರತಯುತ್ತದೆ. I have already given by ruling. ನಾವು 17ನೇ ತಾರೀಖಿನವರೆಗೂ ಕೂಡ ಸದನವನ್ನು ನಡೆಸುತ್ತಿದ್ದೇವೆ. ಅವರೂ ಕೂಡ ಏಳು ಅಥವಾ ಎಂಟನೇ ತಾರೀಖು ತೀರ್ಮಾನ ಮಾಡುತ್ತಾರೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಏಕೆಂದರೆ ತಾವು ಒಪ್ಪಿಕೊಂಡ ವಿಚಾರ ಬೇರೆ.

ಅಧ್ಯಕ್ಷರು : ಹಾಗಾದರೆ ಈ ವಿಚಾರ ನ್ಯಾಯಾಲಯದಲ್ಲೆ ಇದ್ದಾಗ ಪುನ: ಚರ್ಚೆಯನ್ನು ಹೇಗೆ ಮಾಡುವುದಕ್ಕಾಗುತ್ತದೆ ಹೇಳಿ?

ಶ್ರೀ ಬಿ. ಸೋಮಶೇಕರ್ : ಮಾನ್ಯ ಅಧ್ಯಕ್ಷರೆ, ಇದನ್ನು ತಾವು ರೀ-ಕನ್ಸಿಡರ್ ಮಾಡಬೇಕು. ನಾವು ಹೇಳಿದ ಹಾಗೆ ತಾವು ಆಶ್ವಾಸನೆಯನ್ನು ಕೊಟ್ಟಿರಿ.

MR. SPEAKER : We have taken a decision. ನೀವೆಲ್ಲಾ ಸಹಮತ ಹೇಳಿದ್ದೀರಿ. ನ್ಯಾಯಾಲಯದಲ್ಲಿ ಇದ್ದಾಗ ನಾವು ಮಾತನಾಡಬಾರದು ಎಂದು ಹೇಳಿರುವಾಗ ಪುನ: ಅದನ್ನು ಹೇಗೆ ತೆಗೆದುಕೊಳ್ಳುವುದಕ್ಕಾಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್‌ನಲ್ಲಿ ಪೂರ್ತಿ ಡಿಸಿಷನ್ ಆಗೋವರೆಗೂ ಈ ವಿಷಯವನ್ನು ಸದನದಲ್ಲಿ ಮಾತನಾಡಬಾರದು ಎಂದರೆ ಹೇಗೆ?

ಅಧ್ಯಕ್ಷರು : ಮಾತನಾಡಕೂಡದು ಎಂದು ಅಲ್ಲಿ. Again it will amount to sub-judice.

5.30 ಪಿ.ಎಂ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾಳೆ ಡಾ।। ರಾಜ್‌ಕುಮಾರ್‌ರವರ ಬಿಡುಗಡೆಯಾಯಿತು ಎಂದರೆ...

ಅಧ್ಯಕ್ಷರೆ : ಆಗ ನೋಡೋಣ, ಆ ಸಂದರ್ಭದಲ್ಲಿ ಬಿ.ಎ.ಸಿ. ಮೀಟಿಂಗ್ ಇಟುಕೊಳ್ಳೋಣ ಅದರ ಬಗ್ಗೆ ಮಾತನಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ಈಗ ನೀವು ರೂಲಿಂಗ್ ಕೊಟ್ಟಿದ್ದೀರಲ್ಲಾ, ರೂಲಿಂಗ್ ಅನ್ನು ರೀ-ಕನ್ಸಿಡರ್ ಮಾಡಿ ಎಂದು ಹೇಳುವುದು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ನಾವು ಈ ರೂಲಿಂಗ್ ಅನ್ನು ಎಲ್ಲರ ಅಭಿಪ್ರಾಯದಂತೆ ಒಪ್ಪಿಕೊಂಡಿದ್ದೇವೆ. ಈ ವಿಚಾರ 31ನೇ ತಾರೀಖು ಚರ್ಚೆಗೆ ಬರಬೇಕು, ತಾವು ರೀಕನ್ಸಿಡರ್ ಮಾಡಬೇಕು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಆಗ ನೀವು ಇದನ್ನು ಪುನರ್ ವಿಮರ್ಶೆ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಆಗ ಪುನರ್ ವಿಮರ್ಶೆ ಮಾಡುವುದಕ್ಕೆ ಆಲೋಚನೆ ಮಾಡೋಣ. ದೇವರ ದಯದಿಂದ ಅವರು ಬಿಡುಗಡೆಯಾಗಿ ಬರಲಿ. At this stage, I cannot change my Ruling.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ....

(ಗೊಂದಲ)

ಅಧ್ಯಕ್ಷರು : ನೀವು ಮತ್ತೆ ಮತ್ತೆ ಅದನ್ನೇ ಕೇಳುತ್ತಾ ಇದ್ದರೆ ಹೇಗೆ? ಆಗ ನಾವು ಪುನರ್ ಪರಿಶೀಲನೆ ಬಗ್ಗೆ ವಿಚಾರ ಮಾಡೋಣ. ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ದಿನಾಂಕ 23ನೇ ಅಕ್ಟೋಬರ್ 2000ರಂದು ನಡೆದ ಕರ್ನಾಟಕ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಅ) ಈಗಾಗಲೇ ಒದಗಿಸಲಾಗಿರುವ ವಿಧಾನಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿ ದಿನಾಂಕ 27ನೇಅಕ್ಟೋಬರ್ ಹಾಗೂ ದಿನಾಂಕ 2ಮತ್ತು 3ನೇ ನವೆಂಬರ್ 2000ರಂದು ಉಪವೇಶವಗಳಿರುವುದಿಲ್ಲ, ಅಂದರೆ ಮೊದಲು ಪ್ರಕಟಗೊಂಡಂತೆ ಈ ದಿನಾಂಕದಂದು ಇತ್ತು, ಆದರೆ ಈಗ ಇರುವುದಿಲ್ಲ, ದಿನಾಂಕ 6, 7, 8, 9 ಮತ್ತು 10ನೇ ನವೆಂಬರ್‌ಗಳಂದು ಈ ಹಿಂದೆ ನಿಗದಿಪಡಿಸಿದ ಕಾರ್ಯಕ್ರಮದಂತೆ ಉಪವೇಶನಗಳಿರುವುದು.

ಆ) ಈ ಹಿಂದೆ ಒದಗಿಸಲಾಗಿದ್ದ ವಿಧಾನ ಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿ ದಿನಾಂಕ 10ನೇ ನವೆಂಬರ್, 2000ವರೆವಿಗೆ ಕಾರ್ಯಕ್ರಮಗಳನ್ನು ನಿಗದಿಗೊಳಿಸಿದ್ದು, ಸದನದ ಕಾರ್ಯಕಲಾಪಗಳನ್ನು ದಿನಾಂಕ 13, 14, 15, 16 ಮತ್ತು 17ನೇ ನವೆಂಬರ್‌ಗಳಂದು ಮುಂದುವರಿಸಲು ಬಿ.ಎ.ಸಿ. ಮೀಟಿಂಗ್‌ನಲ್ಲಿ ತೀರ್ಮಾನಿಸಲಾಗಿದೆ.

ಇ) ದಿನಾಂಕ 27ನೇ ಅಕ್ಟೋಬರ್ 2 ಮತ್ತು 3ನೇ ನವೆಂಬರ್ 2000ದಂದು ಇದ್ದ ನಿಗಧಿತ ಪ್ರಶ್ನೆಗಳ ಪಟ್ಟಿಗಳನ್ನು ಕ್ರಮವಾಗಿ 15, 16 ಮತ್ತು 17ನೇ ನವೆಂಬರ್, 2000ಗಳಂದು ತೆಗೆದುಕೊಳ್ಳಲಾಗುತ್ತದೆ, ಮತ್ತು ಮುಂದುವರಿಸಿದ ಉಪವೇಶನದಲ್ಲಿ ದಿನಾಂಕ 13 ಮತ್ತು 14ನೇ ನವೆಂಬರ್‌ಗಳಂದು ಕ್ರಮವಾಗಿ ಆ ಮತ್ತು ಆ ಸಮೂಹಗಳಲ್ಲಿ ಬರುವ ಇಲಾಖೆಗಳಿಗೆ ಅಂದರೆ ಆಯಾ ದಿವಸಗಳಿಗೆ ಬರುವ ಸಂಬಂಧಿಸಿದ ಪ್ರಶ್ನೆಗಳನ್ನು ಮಾನ್ಯ ಸದಸ್ಯರಿಂದ ಸ್ವೀಕರಿಸಲಾಗುವುದು. ಇದನ್ನು ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00ಗಂಟೆಗೆ ಸೇರುವುದು.

(ಸದನವು ಸಂಜೆ 5ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 25ನೇ ಅಕ್ಟೋಬರ್ ಮಾಹೆ 2000ದ ಬುಧವಾರದಂದು ಬೆಳಿಗ್ಗೆ 11.00ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿನ್ನೆ ಮಾನ್ಯ ಸದಸ್ಯರ ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುದ್ರಕರು:- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು.ತುಮಕೂರು, ಕಾಸೂ. 170 - 350 ಪುಸ್ತಕಗಳು ದಿ: 13-12-2002.